## ನವಿಲುಗನ್ನಡಿ




▶▶ ವರ್ಣರಂಜಿತ ಚಿತ್ತಾರದ ಮುಖಪುಟವಿರುವ ಅಕ್ಟೋಬರ್ ಸಂಚಿಕೆ ಅರ್ಥಪೂರ್ಣ ಬರಹಗಳಿಂದ ಮನಸೆಳೆಯಿತು. 'ಮಯೂರ'ದಲ್ಲಿ ಪ್ರಕಟವಾಗುವ ಕತೆಗಳು ಯಾವುದೇ ಕಾಲಕ್ಕೂ ಪ್ರಸ್ತುತ ಎನ್ನುವುದಕ್ಕೆ ಗಿರಡ್ಡಿ ಗೋವಿಂದರಾಜರ 'ತಿರುಕರು' ಜೀವಂತ ಸಾಕ್ಷಿ. ಮನದಲ್ಲಿ ಮತ್ತೆ ಮತ್ತೆ ಮೆಲುಕು ಹಾಕುವಂತಹ ಸಂಚಿಕೆ ನೀಡಿದ್ದೀರಿ.

**ಎಂ.ಕೆ. ಮಂಜುನಾಥ್, ಬೆಂಗಳೂರು**

▶▶ ಗೋಪಾಲಕೃಷ್ಣ ಪೈ ಅವರ ಕತೆ 'ಟ್ರಾಫಿಕ್ ಜಾಮ್' ನಗರದ ಜನಜೀವನವನ್ನು ಮನ ಮುಟ್ಟುವಂತೆ ಚಿತ್ರಿಸಿದೆ. 'ನಾಯಿ ಪುರಾಣ' ಪ್ರಬಂಧ ನಮ್ಮ ಬಾಲ್ಯದ ನೆನಪುಗಳನ್ನು ಮರುಕಳಿಸಿತು. ಎಚ್. ನಾಗವೇಣಿ ಅವರ ನೀಳ್ಗತೆ 'ಬೆಸ್ತ ಮತ್ತು ಮೀನು' ಕುತೂಹಲವನ್ನು ಹೆಚ್ಚಿಸಿತು.

**ಭೀಮಣ್ಣ ವೈ. ಮಾಚಗುಂಡಾಳ, ಯಾದಗಿರಿ**

▶▶ ಕತೆ 'ಟ್ರಾಫಿಕ್ ಜಾಮ್' ತನ್ನ ವಿಶಿಷ್ಟ ಶೈಲಿಯಿಂದ ಆಪ್ತವಾಗುತ್ತದೆ. ದುಡಿಯುವ ಮಹಿಳೆಯ ದಿನಚರಿ ಹಾಗೂ ನಗರಜೀವನ ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ.

**ಅನುಪಲ್ಲವಿ, ಮೂಡುಬಿದಿರೆ**

▶▶ ಕತೆಗಳ ಸಹಿತ ಎಲ್ಲಾ ಬರಹಗಳು ಮನಸ್ಸಿಗೆ ಮುದ ನೀಡಿದವು. ವಿಶೇಷವಾಗಿ ಕೃಷ್ಣಮೂರ್ತಿ ಹನೂರು ಅವರ 'ಕಾಲು ದಾರಿಯ ಕಥನ ಭಾಗ' ಲೇಖನ ಬೆಳಗೆರೆ ಕೃಷ್ಣಶಾಸ್ತ್ರಿಗಳ ವ್ಯಕ್ತಿತ್ವವನ್ನು ಬಹಳ ಮನೋಜ್ಞವಾಗಿ ಅನಾವರಣಗೊಳಿಸಿದೆ. 2016 ಕೃಷ್ಣಶಾಸ್ತ್ರಿಗಳ ಜನ್ಮಶತಮಾನೋತ್ಸವ ವರ್ಷ. ಅವರ ಜನ್ಮಶತಮಾನೋತ್ಸವಕ್ಕೆ ವಿಶೇಷ ಕೊಡುಗೆ ಈ ಲೇಖನ. ಜೊತೆಗೆ ಲೇಖನ 'ಜಾನಪದ ಸಿರಿ' ಸಿರಿಯಜ್ಜಿಯ ವ್ಯಕ್ತಿತ್ವ, ಅಗಾಧ ಜ್ಞಾಪಕ ಶಕ್ತಿಯನ್ನು ಸಹ ಪರಿಣಾಮಕಾರಿಯಾಗಿ ಹಾಗೂ ಆಪ್ತವಾಗಿ ಪರಿಚಯಿಸಿದೆ.

**ಕೆ. ನಾಗರಾಜಪ್ಪ, ಕ್ಯಾದಿಗ್ಗೆರೆ, ಚಿತ್ರದುರ್ಗ**

▶▶ 'ಕಾಲುದಾರಿಯ ಕಥನ ಭಾಗ' ಲೇಖನ ತುಂಬಾ ನೈಜತೆಯಿಂದ ಕೂಡಿದೆ. ಬೆಳಗೆರೆ ಕೃಷ್ಣಶಾಸ್ತ್ರಿ ಮತ್ತು ಜನಪದ ಹಾಡುಗಾರ್ತಿ ಸಿರಿಯಜ್ಜಿಯ ವ್ಯಕ್ತಿಪರಿಚಯ ಚೆನ್ನಾಗಿತ್ತು. ಚಳ್ಳಕೆರೆ ಸುತ್ತಮುತ್ತ ಇರುವ ಮೂಢನಂಬಿಕೆಗಳು ಮೈಜುಮ್ಮೆನಿಸುತ್ತವೆ.

**ತಿಮ್ಮರಾಜು ಎಸ್.ಆರ್., ದಾವಣಗೆರೆ**

ಗಿರಡ್ಡಿ ಗೋವಿಂದರಾಜ ಅವರ ಕತೆ 'ತಿರುಕರು' ಎಂಥ ವಿಭಿನ್ನವಾದ ಆತ್ಮೀಯವಾದ ದಾಖಲು. ಇಂಥ ಅತ್ಯುತ್ತಮ ವಿಭಿನ್ನ ಲೇಖನ, ಕತೆ, ಜೀವನ ಚಿತ್ರಣಗಳ ದಾಖಲಾತಿಯ ಮೂಲಕ ಸಾಂಸ್ಕೃತಿಕವಾಗಿ ಇಷ್ಟು ದೀರ್ಘಕಾಲ 'ಮಯೂರ' ಬೆಳೆದು ಬಂದಿದೆಯೆಂಬುದು ಅತ್ಯಂತ ಸಂತೋಷದ ವಿಷಯ. 'ತಿರುಕರು' ಕತೆಯಲ್ಲಿ ನಿವೃತ್ತಿಯ ವೇತನಕ್ಕೆ ಪರದಾಡುತ್ತಿರುವ ಆ ವಯೋವೃದ್ಧನ ಪಾತ್ರ ಎಂಥ ಮಾರ್ಮಿಕವಾದದ್ದು. ಇಷ್ಟು ವರ್ಷಗಳ ನಂತರವೂ ಆ ಪಾತ್ರವು 'ಮಯೂರ'ದಲ್ಲಿ ಬದುಕಿ ನನ್ನಂಥವರು ಓದಲು ಅವಕಾಶ ದೊರಕಿಸಿದ್ದಕ್ಕೆ ಧನ್ಯವಾದಗಳು.

**ಶೂದ್ರ ಶ್ರೀನಿವಾಸ್, ಬೆಂಗಳೂರು**